# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ದಿನಾಂಕ: 21.11.2020 ರಂದು ಬೆಳಿಗ್ಗೆ 11.00 ಗಂಟೆಗೆ ವಾರ್ಡ್ ನಂ. 186 ಜರಗನಹಳ್ಳಿ, ವಾರ್ಡ್ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿ.

<u>ಹಾಜರಿದ್ದವರು.</u>

| | |
|---|---|
| ಡಾ॥ ರವಿ. ನೋಡಲ್ ಅಧಿಕಾರಿಗಳು | ಜರಗನಹಳ್ಳಿ 186ರ ವಾರ್ಡ್ ಸಮಿತಿ ಅಧ್ಯಕ್ಷರು. ಬಿಬಿಎಂಪಿ. |
| ಕೆ.ಆರ್ ನಾಗರಾಜ್. | ಸಹಾಯಕ ಅಭಿಯಂತರರು, ವಾರ್ಡ್ ನಂ 186. ಬಿಬಿಎಂಪಿ. |
| ಶ್ರೀ ಶಿವು ಮತ್ತು ಸಹಾಯಕ. | ಬೀದಿ ದೀಪ ನಿರ್ವಹಣೆ ಗುತ್ತಿಗೆದಾರ ಸಿಬ್ಬಂದಿ. |
| ಶ್ರೀ ಮಹೇಶ್. | ಕಿರಿಯ ಆರೋಗ್ಯ ಪರಿವೀಕ್ಷಕರು. ಬಿಬಿಎಂಪಿ |
| ಶ್ರೀ ಕೃಷ್ಣ | ಕಿರಿಯ ಆರೋಗ್ಯ ಪರಿವೀಕ್ಷಕರು. ಬಿಬಿಎಂಪಿ. |
| ಶ್ರೀ ಕೃಷ್ಣಯ್ಯ | ಸಹಾಯಕ ಅಭಿಯಂತರರು. ಬೆಸ್ಕಾಂ |
| ಶ್ರೀ ಗುರು ಪ್ರಸಾದ್. | ಕಿರಿಯ ಅಭಿಯಂತರರು, ಬೆಸ್ಕಾಂ |
| ಶ್ರೀ ವಿನಯ್. | ಸಹಾಯಕ ಅಭಿಯಂತರರು, ನೀರು ಸರಬರಾಜು & ಒಳಚರಂಡಿ ಮಂಡಳಿ. |
| ಶ್ರೀ ಅಂಜನಪ್ಪ, ಶ್ರೀ.ಅರ್ಜುನ್‌ಗೌಡ, ಶ್ರೀ ಶಶಿ, ಮತ್ತು ಶ್ರೀ ರಾಜಪ್ಪ. | ವಾಲ್ ಮ್ಯಾನ್‌ಗಳು. ನೀರು ಸರಬರಾಜು & ಒಳಚರಂಡಿ ಮಂಡಳಿ. |
| ಶ್ರೀ ಹೋಬಳೇಶ್ ಮತ್ತು ಲೋಕೇಶ್. | ಸ್ವಚ್ಛತಾ ಮೇಲ್ವಿಚಾರಕರು. ಬಿಬಿಎಂಪಿ. |
| ಶ್ರೀ ಮೊಹಮ್ಮದ್ ಅಬ್ದುಲ್ ಆಲಿಂ. | ಹೆಚ್.ಎಂ ತಂಬೂರಿಯನ್ ಅಪಾರ್ಟ್‌ಮೆಂಟ್ ಓನರ್ಸ್ ಅಸೋಸಿಯೇಷನ್. |
| ವಾರ್ಡ್ ನಂ 186ರ ನಾಗರೀಕರು ಮತ್ತು ಹಿರಿಯ ನಾಗರೀಕರು. | 10-15 ಮಂದಿ. |

ವಾರ್ಡ್ ಸಮಿತಿ ಸಭೆಗೆ ಹಾಜರಾಗಿದ್ದ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರನ್ನು ಕಾರ್ಯದರ್ಶಿ ಹಾಗೂ ಸಂಚಾಲಕರು ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

| | |
|---|---|
| ವಿಷಯ-53 | ಹಿಂದಿನ ಸಭೆಯ ನಡವಳಿಯನ್ನು ಓದಿ ರೆಕಾರ್ಡ್ ಮಾಡುವುದು. |
| ತೀರ್ಮಾನ-53 | ಹಿಂದಿನ ಸಭೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ವಿಷಯ ಮತ್ತು ತೀರ್ಮಾನವನ್ನು ಓದಿ ರೆಕಾರ್ಡ್ ಮಾಡಲಾಯಿತು. |
| ಹಿಂದಿನ ಸಭೆಯಲ್ಲಿ ಮುಂದೂಡಿದ ವಿಷಯ -45 | ವಾರ್ಡ್ ವ್ಯಾಪ್ತಿಗೆ ಒಳಪಡುವ ಸಾರಕ್ಕಿ/ಜರಗನಹಳ್ಳಿ/ಪುಟ್ಟೇನಹಳ್ಳಿ ಕೆರೆಯ ಅಭಿವೃದ್ಧಿ ಕಾಮಗಾರಿಯ ಬಗ್ಗೆ ಚರ್ಚಿಸುವುದು. |

| | |
|---|---|
| ತೀರ್ಮಾನ :-45 | ಕೆರೆಯ ಅಭಿವೃದ್ಧಿ ಕಾಮಗಾರಿಯ ಬಗ್ಗೆ ಚರ್ಚಿಸಲು ಸಂಬಂಧಿಸಿದ ಅಧಿಕಾರಿ ಅಥವಾ ಸಿಬ್ಬಂದಿ ಹಾಜರಿಲ್ಲದಿರುವ ಕಾರಣ ವಿಷಯವನ್ನು ಮುಂದಿನ ಸಭೆಗೆ ಮುಂದೂಡಲು ಹಾಗೂ ಮುಂದಿನ ಸಭೆಯಲ್ಲಿ ಸಂಬಂಧಿಸಿದ ಸಿಬ್ಬಂದಿ ಹಾಜರಾಗದಿದ್ದಲ್ಲಿ ಅಧಿಕಾರಿ/ಸಿಬ್ಬಂದಿಯ ನಿರ್ಲಕ್ಷ್ಯತೆಯನ್ನು ಮಾನ್ಯ ಆಯುಕ್ತರು ರವರ ಗಮನಕ್ಕೆ ತರಲಾಗುವುದು ಎಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| ಹಿಂದಿನ ಸಭೆಯಲ್ಲಿ ಮುಂದೂಡಿದ ವಿಷಯ-46 | ವಾರ್ಡ್ ವ್ಯಾಪ್ತಿಗೆ ಒಳಪಡುವ ಬೃಹತ್ ನೀರುಗಾಲುವೆ ಕಾಮಗಾರಿಯ ಬಗ್ಗೆ ಚರ್ಚಿಸುವುದು. |
| ತೀರ್ಮಾನ :-46 | ಬೃಹತ್ ನೀರುಗಾಲುವೆ ಇಲಾಖೆಯ ಕಾಮಗಾರಿಗಳ ಬಗ್ಗೆ ಚರ್ಚಿಸಲು ಸಂಬಂಧಿಸಿದ ಅಧಿಕಾರಿ ಅಥವಾ ಸಿಬ್ಬಂದಿ ಹಾಜರಿಲ್ಲದಿರುವ ಕಾರಣ ವಿಷಯವನ್ನು ಮುಂದಿನ ಸಭೆಗೆ ಮುಂದೂಡಲು ಹಾಗೂ ಮುಂದಿನ ಸಭೆಯಲ್ಲಿ ಸಂಬಂಧಿಸಿದ ಸಿಬ್ಬಂದಿ ಹಾಜರಾಗದಿದ್ದಲ್ಲಿ ಅಧಿಕಾರಿ/ಸಿಬ್ಬಂದಿಯ ನಿರ್ಲಕ್ಷ್ಯತೆಯನ್ನು ಮಾನ್ಯ ಆಯುಕ್ತರು ರವರ ಗಮನಕ್ಕೆ ತರಲಾಗುವುದು ಎಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| ವಿಷಯ-54 | ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆಯ ಬಗ್ಗೆ ಚರ್ಚಿಸುವುದು. |
| ತೀರ್ಮಾನ :-54 | ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಸೋಂಕಿತ ವ್ಯಕ್ತಿಗಳ ಮನೆಯ ಅಕ್ಕಪಕ್ಕದಲ್ಲಿ ಔಷಧಿ ಸಿಂಪಡಣೆಯ ಹಾಗೂ ಸೊಳ್ಳೆ ನಿಯಂತ್ರಣಕ್ಕಾಗಿ ಫಾಗಿಂಗ್ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸುತ್ತಿರುವುದಿಲ್ಲ ಸಾರ್ವಜನಿಕರು ಸಭೆಯಲ್ಲಿ ದೂರಿರುತ್ತಾರೆ.<br><br>ಈ ವಿಚಾರವಾಗಿ ವಾರ್ಡ್‌ನ ಕಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ ಮಹೇಶ್ ರವರು ಸೊಳ್ಳೆ ನಿಯಂತ್ರಣ ಹಾಗೂ ಕೋವಿಡ್-19 ಔಷಧಿ ಸಿಂಪಡಣೆ ಕಾಮಗಾರಿಯನ್ನು ಸಮರ್ಪಕವಾಗಿ ನಿರ್ವಹಿಸುತ್ತಿರುವುದಾಗಿ ಸಭೆಗೆ ತಿಳಿಸಿರುತ್ತಾರೆ.<br><br>ಸಮಿತಿಯ ಅಧ್ಯಕ್ಷರು ಮಾತನಾಡುತ್ತಾ ಇನ್ನು ಮುಂದೆ ಔಷಧಿ ಸಿಂಪಡಣೆ ಕಾಮಗಾರಿಯ ಜಿ.ಪಿ.ಎಸ್ ಛಾಯಾ ಚಿತ್ರಗಳನ್ನು ವಾರ್ಡ್ ಸಮಿತಿಯ ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಅಪ್‌ಲೋಡ್ ಮಾಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| ವಿಷಯ-55 | ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳ ನಿರ್ವಹಣೆಯ ಬಗ್ಗೆ ಚರ್ಚಿಸುವುದು |
| ತೀರ್ಮಾನ :-55 | ವಾರ್ಡ್ ನಂ 186 ಜರಗನಹಳ್ಳಿ ವ್ಯಾಪ್ತಿಯ ಸಾರ್ವಜನಿಕರು ಮೊಬೈಲ್ ಅಂಟ್ ಅಂಗಡಿಯ ಮುಂದೆಯಿರುವ ಬೀದಿ ದೀಪದ ಕಂಬವನ್ನು ಸ್ಥಳಾಂತರಿಸಲು ಹಾಗೂ ಅಕ್ಕಪಕ್ಕದಲ್ಲಿ ಶಿಥಿಲಗೊಂಡು ಬಿದ್ದಿರುವ ಬೀದಿ ದೀಪದ ಕಂಬಗಳನ್ನು ಸ್ಥಳಾಂತರಿಸಲು ಅಬ್ದುಲ್ ಅಲೀಂ ರವರು ಕೋರಿರುತ್ತಾರೆ.<br><br>ಅಷ್ಟಲಕ್ಷ್ಮೀ ಬಡಾವಣೆಯ ಶ್ರೀ ಮಂಜುನಾಥ್ ಆಚಾರ್‌ರವರು 2ನೇ ಅಡ್ಡರಸ್ತೆಯಲ್ಲಿರುವ ಬೀದಿ ದೀಪದ ಕಂಬಗಳನ್ನು ಸ್ಥಳಾಂತರಿಸಲು ಕೋರಿರುತ್ತಾರೆ.<br><br>ಒಂದು ತಿಂಗಳ ಒಳಗಾಗಿ ಸ್ಥಳಾಂತರಿಸಲಾಗುವುದು ಎಂದ ಹಾಜರಿದ್ದ ಅಧಿಕಾರಿಗಳು/ಸಿಬ್ಬಂದಿ ಸಭೆಗೆ ತಿಳಿಸಿದರು. |
| ವಿಷಯ-56 | ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರು ಮತ್ತು ಒಳಚರಂಡಿ ನಿರ್ವಹಣೆಯ ಬಗ್ಗೆ ಚರ್ಚಿಸುವುದು. |

| | |
|---|---|
| ತೀರ್ಮಾನ :–56 | ವಾರ್ಡ್ ವ್ಯಾಪ್ತಿಯ ಪೆರಿಯಣ್ಣ ಬಡಾವಣೆಯಲ್ಲಿ ನೀರು ಕಲುಷಿತಗೊಂಡಿರುವುದಾಗಿ ಕಳೆದ 2-3 ಸಭೆಯಲ್ಲಿ ಸಾರ್ವಜನಿಕರು ತಿಳಿಸಿದ್ದರು. ಈ ಮೇರೆಗೆ ಬಿ.ಡಬ್ಲ್ಯು.ಎಸ್.ಎಸ್.ಬಿ ವತಿಯಿಂದ ತಪಾಸಣೆ ಮಾಡುತ್ತಿದ್ದು ಈ ವರೆವಿಗೂ ಸಮಸ್ಯೆಯು ಬಗೆಹರಿದಿರುವುದಿಲ್ಲ ಆದುದರಿಂದ ಪೆರಿಯಣ್ಣ ಬಡಾವಣೆಯ ಶಿವಣ್ಣ ಡಿಪೋ ರಸ್ತೆ, 1ನೇ ಅಡ್ಡರಸ್ತೆ ಮತ್ತು 2ನೇ ಅಡ್ಡರಸ್ತೆಯಲ್ಲಿ ಮ್ಯಾನ್‌ಹೋಲ್‌ಗಳು ಮತ್ತು 9 ಇಂಚಿನ ಕೊಳವೆ ಮಾರ್ಗವನ್ನು ತುರ್ತಾಗಿ ಕಾಮಗಾರಿಯನ್ನು ಕೈಗೆತ್ತಿಕೊಂಡು ಸಮಸ್ಯೆಯನ್ನು ಬಗೆಹರಿಸಲು ವಾರ್ಡ್‌ನ ಅಧ್ಯಕ್ಷರು ಮತ್ತು ಸದಸ್ಯರುಗಳು ಸರ್ವಾನುಮತದಿಂದ ತೀರ್ಮಾನಿಸಿರುತ್ತಾರೆ. |
| ವಿಷಯ–57 | ವಾರ್ಡ್ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸುವುದು. |
| ತೀರ್ಮಾನ :–57 | ವಾರ್ಡ್ ವ್ಯಾಪ್ತಿಯ ರಾಜೀವ್ ಗಾಂಧಿ 4ನೇ ಅಡ್ಡರಸ್ತೆಯ ನಿವಾಸಿಯಾದ ಶ್ರೀ ಚಂದ್ರರವರು ಮಾತನಾಡುತ್ತಾ ಗಂಗಾದೇಶ್ವರ ದೇವಸ್ಥಾನದ ಪಕ್ಕದಲ್ಲಿರುವ ಕಲ್ವರ್ಟ್‌ಗಳಿಗೆ ಸ್ಲೋಪ್ ಕಾಂಕ್ರೀಟ್ ಹಾಕಲು ಕೋರಿರುತ್ತಾರೆ ಹಾಗೂ ಪಾಟ್ ಹೋಲ್‌ಗಳನ್ನು ಹಾಕಲು ಕೋರಿರುತ್ತಾರೆ.<br><br>ಹಾಜರಿದ್ದ ಸಹಾಯಕ ಅಭಿಯಂತರರು/ಕಾರ್ಯದರ್ಶಿಗಳು ಪ್ರಸ್ತಾಪಿತ ಕಾಮಗಾರಿಗಳನ್ನು ನಿರ್ವಹಿಸುವುದಾಗಿ ಸಭೆಗೆ ತಿಳಿಸಿರುತ್ತಾರೆ. |
| ವಿಷಯ–58 | ವಾರ್ಡ್ ವ್ಯಾಪ್ತಿಯಲ್ಲಿ ಬೆಸ್ಕಾಂ ವತಿಯಿಂದ ಎ.ಬಿ.ಸಿ ಕೇಬಲ್ ಅಳವಡಿಸುತ್ತಿರುವ ಬಗ್ಗೆ ಚರ್ಚಿಸುವುದು. |
| ತೀರ್ಮಾನ :–58 | ಎ.ಬಿ.ಸಿ ಕೇಬಲ್ ಹಾಗೂ ಅಂಡರ್ ಗ್ರೌಂಡ್ ಕೇಬಲ್ ಅಳವಡಿಸುವ ಕಾಮಗಾರಿಯು ನಿಧಾನಗತಿಯಲ್ಲಿ ನಡೆಯುತ್ತಿದ್ದು ಇದರಿಂದ ಸಾರ್ವಜನಿಕರು & ವಾಹನ ಸವಾರರಿಗೆ ಓಡಾಡಲು ತೊಂದರೆಯಾಗುತ್ತಿರುವುದಾಗಿ ಸಾರ್ವಜನಿಕರು ತಿಳಿಸಿರುತ್ತಾರೆ.<br><br>ಶ್ರೀ ಕೃಷ್ಣಯ್ಯ. ಸಹಾಯಕ ಅಭಿಯಂತರರು ಬೆಸ್ಕಾಂರವರು ಮಾತನಾಡುತ್ತಾ ಸದರಿ ಕಾಮಗಾರಿಯು 25–30 ದಿನಗಳ ಒಳಗೆ ಮುಕ್ತಾಯಗೊಳ್ಳಲು ಶ್ರಮಿಸುವುದಾಗಿ ಸಭೆಗೆ ತಿಳಿಸಿದರು ಹಾಗೂ ಸಾರಕ್ಕಿ ತೋಟ 3ನೇ ಅಡ್ಡರಸ್ತೆ ಮತ್ತು ಜರಗನಹಳ್ಳಿ ಪಾರ್ಕ್ ಪಶ್ಚಿಮ ದಿಕ್ಕಿನ ರಸ್ತೆಯಲ್ಲಿ ಶಿಥಿಲಗೊಂಡಿರುವ ಬೀದಿ ದೀಪದ ಕಂಬಗಳನ್ನು ಬದಲಾಯಿಸುವುದಾಗಿ ತಿಳಿಸಿದರು. |
| ವಿಷಯ–59 | ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್–19 ಬಗ್ಗೆ ಚರ್ಚಿಸುವ ಬಗ್ಗೆ. |
| ತೀರ್ಮಾನ :–59 | ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್–19 ಸಂಕ್ರಾಮಿಕ ರೋಗವು ನಿಯಂತ್ರಣದಲ್ಲಿ ಇರುವುದಾಗಿ ಸಂಬಂಧಿದ ಸಿಬ್ಬಂದಿ ಸಭೆಗೆ ತಿಳಿಸಿರುತ್ತಾರೆ. |

ವಾರ್ಡ್‌ನ ಅಧ್ಯಕ್ಷರು ವಂದನಾರ್ಪಣೆ ಮಾಡುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/–
ನೋಡಲ್ ಅಧಿಕಾರಿಗಳು
ವಾರ್ಡ್ ನಂ 186.